ಕವಿತೆ




## ಸದಾಶಿವ ಸೊರಟೂರು

ಕಲೆ: ಜಯವಂತ್ ಶೆಟ್ಟಿಗಾರ್




# ಅಮೃತ ನೋವು

ಅವಳಿಗೆ ಅದೆಷ್ಟು ಸಲುಗೆ
ಈ ನೋವಿನೊಂದಿಗೆ!

ನೋವನ್ನು ಹೀಗೆ ನೆರಿಗೆಯಾಗಿ
ಮಡಚಿಕೊಂಡು ಉಟ್ಟ ದಿನ
ಅವಳು ಹಿತವಾಗಿ ಮೈ ಮುರಿಯುವುದು
ನೋಡಬೇಕು ನೀವು,
ದೇವರುಗಳು ಕಿಟಕಿಯಲ್ಲಿ
ಸಾಲುಗಟ್ಟಿ ನಿಲ್ಲುತ್ತಾರೆ...



ಆ ದಿನಗಳಲ್ಲೇ ನಾನು ಅವಳ
ಮುಂದೆ ಬೊಗಸೆ ಹಿಡಿಯುತ್ತೇನೆ
ನೋವು ತುಂಬಿಕೊಂಡು
ಕೆಂಪಾದ ತುಟಿಗಳಿಗೆ
ಅದ್ಯಾರು ನಗುವಿನ ಕಡ್ಡಿ ಗೀರಿದರೊ
ತುಟಿ ತುಂಬಾ ನಗು ಧಿಗ್ಗೆನ್ನುತ್ತದೆ
ಬೊಗಸೆ ತುಂಬಾ ಕಣ್ಣಿಂದ ಸುರಿದ
ನಕ್ಷತ್ರಗಳು

ಹಾಗೆ ನೋವಿನ ಪಾದಗಳನ್ನು
ಹೂ ತೋಟದಲ್ಲಿ
ಊರಿದ ಕಡೆಯಲ್ಲಾ
ಮೊಗ್ಗುಗಳು ಸಲೀಸಾಗಿ ಹೂವಾಗುತ್ತವೆ...

ಹಸಿ ಹೆರಳಿನಿಂದ ಜಾರಿ
ಬೆನ್ನ ಮೇಲೆ ಬೀಳುವ ಹನಿ ಹನಿಗೂ
ಬೆನ್ನ ನೋವು ಸವರುವ ಹುಕಿ

'ನಗುವಿಗೆ ಕುಣಿಯದ ನಾನು
ಸುಖಕ್ಕೂ ಬಿಟ್ಟಿಕೊಳ್ಳದ ನಾನು
ಈ ನೋವಿಗೆ ಅರಳುತ್ತೇನೆ...'
ನೀ ಎಂದಾಗಲೆಲ್ಲಾ
ನನ್ನ ಕಣ್ಣುಗಳಲ್ಲಿ ಗಾಳಿಗೆ ಓಲಾಡುವ ಹಣತೆ

'ಕಾಲು ಮುರಿದದ್ದು,
ಯಾರೊ ಮನಸು ಕೊಯ್ದದ್ದ
ಅದು ನೋವಲ್ಲ
ಇದು ಅಮೃತ ನೋವು
ನನಗಿದು ನಮ್ಮ ಅಮ್ಮ ಕೊಟ್ಟಿದ್ದು
ಅವರಿಗೆ ಅವರಮ್ಮ
ಅವರಿಗೆ ಅವರಮ್ಮ
ಅವರಿಗೆ ಅವರಮ್ಮನೂ...
ಹೆಣ್ಣು,
ಬರೀ ಹೆಣ್ಣು ಹಡೆಯುವುದಿಲ್ಲ
ಸೊಗಸಾದ ನೋವನ್ನೂ...!'
ನೀ ಹೀಗೆ ನೋವನ್ನು
ಕೊಳಲು ಮಾಡಿ ನುಡಿಸುತ್ತಿದ್ದರೆ
ದೇವರಿಗೂ ಅಚ್ಚರಿ
ನೋವಿಗೂ ಅಚ್ಚರಿ
ನತದೃಷ್ಟ ಗಂಡಸರಿಗೂ ಅಚ್ಚರಿ